ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಹಳೆಯ ರಸ್ತೆಗಳನ್ನು ಅಗೆಯದೆ ಟಾರ್/ವೈಟ್ ಟಾಪಿಂಗ್ ಹಾಕುತ್ತಿರುವ ಕುರಿತು

ಶ್ರೀ ಕೆ. ಗೋವಿಂದರಾಜ್(ವಿಧಾನಸಭೆಯಿಂದ ಚುನಾಯಿತರಾದವರು ) -

1029 (1134) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ರಾಜ್ಯದಲ್ಲಿ ಎಲ್ಲಾ ನಗರಗಳು ಸೇರಿದಂತೆ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಿಲೋಮೀಟರ್ ಉದ್ದದ ರಸ್ತೆಗಳಿಗೆ ಟಾರ್/ವೈಟ್ ಟಾಪಿಂಗ್ ಹಾಕಲಾಗಿದೆ; (ಜಿಲ್ಲಾವಾರು ಸಂಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಇತ್ತೀಚಿನ ವರ್ಷಗಳಲ್ಲಿ ಅವೈಜ್ಞಾನಿಕವಾಗಿ ಪದೇ ಪದೇ ಟಾರ್ ಹಾಕುವ ಸಂದರ್ಭಗಳಲ್ಲಿ ರಸ್ತೆಗಳನ್ನು ಅಗೆಯದೆ ಹಳೆಯ ರಸ್ತೆಗಳ ಮೇಲೆಯೇ ಟಾರ್/ವೈಟ್ ಟಾಪಿಂಗ್ ಹಾಕಿ ರಸ್ತೆಗಳು ಕಟ್ಟಡಗಳಿಗಿಂತ ಎತ್ತರವಾಗುತ್ತಿರುವುದರಿಂದ ಮಳೆ, ಒಳಚರಂಡಿ ನೀರು ಕಟ್ಟಡಗಳಿಗೆ ಹರಿಯುತ್ತಿರುವ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅದರ ಬದಲಾಗಿ ಆಧುನಿಕ ಮಾರ್ಗೋಪಾಯಗಳನ್ನು ಕಂಡು ಹಿಡಿಯಲಾಗಿದೆಯೇ? (ಸಂಪೂರ್ಣ ವಿವರಗಳನ್ನು ಒದಗಿಸುವುದು)